ಶ್ರೀ ಎಂ.ಪಿ. ಪ್ರಕಾಶ್.—ಅಧ್ಯಕ್ಷರೇ, ಈಗಾಗಲೇ ಬಸ್ ನಿಲ್ದಾಣದ ಕೆಲಸ ಸುಮಾರು ೯೦ ಪರ್ಸೆಂಟ್‌ನಷ್ಟು ಮುಗಿದಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಉಕ್ಕು ಪ್ರಾಧಿಕಾರದವರಿಂದ ಸಕಾಲದಲ್ಲಿ ಸರಳುಗಳು ಬರಲಿಲ್ಲ, ಸಿಮೆಂಟ್ ಬೆಲೆ ಏರಿದ್ದರಿಂದ ಸ್ವಲ್ಪ ತಡವಾಗಿದೆ. ಆದರೂ ಸಹ ಸಾಧಾರಣವಾಗಿ ೧೮ ತಿಂಗಳ ಕಾಲದಲ್ಲಿ ಮಳಿಗಾಲ ಬಿಟ್ಟು ಈ ಕೆಲಸವನ್ನು ಪೂರ್ಣಗೊಳಿಸುವಂಥ ಯೋಜನೆ ಹಾಕಿಕೊಂಡಿದ್ದರಿಂದ ಕಾಲ ವಿಳಂಬವಾಗಿಲ್ಲ. ನಿಗದಿಯಾದ ವೇಳೆಯಲ್ಲಿಯೇ ಮಾಡಿ ಕೊಡುತ್ತಿದ್ದಾರೆ. ಗುತ್ತಿಗೆದಾರರಿಗೆ ಏನಾದರೂ ತೊಂದರೆಯಾಗಿದ್ದರೆ ನಿಗಮದವರ ಜೊತೆಯಲ್ಲಿ ಪತ್ರ ವ್ಯವಹಾರ ಮಾಡಬಹುದು.

ಶ್ರೀ ಎಂ.ಎಂ. ನಾಣಯ್ಯ.—ಬಸ್ ಶೆಲ್ಟರ್‌ಗಳನ್ನು ಮಾಡಿಕೊಡುವ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್.—೩-೪ ಬಸ್ ಶೆಲ್ಟರ್‌ಗಳನ್ನು ಮಾಡಿಸಿಕೊಡುತ್ತೇವೆ.

ರೈತರು (ಚಿಕ್ಕ ಹಾಗೂ ಅಂಚಿನಲ್ಲಿರುವ) ಹಾಗೂ ಕಾರ್ಮಿಕರು ಕೊಡಬೇಕಾದ ಕೋರ್ಟ್ ಫೀಯನ್ನು ತೆಗೆದುಹಾಕಬೇಕೆಂಬ ಪ್ರಸ್ತಾವನೆ

೧೧೭೦ ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದುಕೊರತೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನ್ಯಾಯಾಲಯವನ್ನು ಕೋರುವ ರೈತರು (ಚಿಕ್ಕ ಹಾಗೂ ಅಂಚಿನಲ್ಲಿರುವ) ಹಾಗೂ ಕಾರ್ಮಿಕರು ಕೊಡಬೇಕಾದ ಕೋರ್ಟ್ ಫೀಯನ್ನು ತೆಗೆದು ಹಾಕಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದುಕೊರತೆಗಳ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಗಂಗಣ್ಣ.—ಸಣ್ಣ ಹಿಡುವಳಿದಾರರು ಮತ್ತು ಬಡ ಜನರು ಕೋರ್ಟ್ ವ್ಯವಹಾರ ಗಳಿಗೆ ಅನಿವಾರ್ಯವಾಗಿ ಹೋದಾಗ ಶೇಕಡ ೧೦ ರಷ್ಟು ಸ್ಟ್ಯಾಂಪ್ ಫೀಯನ್ನು ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?ಬಂದಿದ್ದರೆ ಅವರಿಗೆ ರಿಯಾಯಿತಿಯನ್ನು ಒದಗಿಸಿ ಕೊಡುವುದಕ್ಕೆ ತಾವು ಏನಾದರೂ ಅವಕಾಶವನ್ನು ಮಾಡಿಕೊಡುತ್ತೀರಾ ಎಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಬಡವರಿಗೆ. ಗೇಣಿದಾರರಿಗೆ ಕಾನೂನಿನ ನೆರವನ್ನು ಕೊಡುವುದಕೋಸ್ಕರವಾಗಿಯೇ ಪ್ರತ್ಯೇಕವಾದ ಒಂದು ವ್ಯವಸ್ಥೆ ಮಾಡಿದ್ದೇವೆ. ಈ ಸಹಾಯವನ್ನು ಬಡ ಗೇಣಿದಾರರೂ ಪಡೆದುಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಉಚಿತವಾದ ಕಾನೂನಿನ ನೆರವನ್ನು ಕೊಡತಕ್ಕ ಒಂದು ಸಂಸ್ಥೆ ಕೂಡ ನಮ್ಮ ರಾಜ್ಯದಲ್ಲಿದೆ, ಆದುದರಿಂದ ಅವರು ಈ ಕಾನೂನಿನ ನೆರವನ್ನು ಪಡೆದುಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ವಿದ್ಯಾರ್ಥಿನಿಲಯಗಳ ಕುರಿತು

೧೨೪ ಶ್ರೀ ಪಿ. ಪಿ, ಹೆಗಡೆ (ಚಿಕ್ಕೋಡಿ).—ಸಮಾಜ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿರುವ ಅನುಸೂಚಿತ ಜಾತಿ ವಿದ್ಯಾರ್ಥಿಗಳ ಪ್ರಿಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಹಾಗೂ ಪ್ರತ್ಯೇಕ ಬಾಲಕ ಬಾಲಕಿಯರ ವಿವರಗಳನ್ನು ನಮೂದಿಸಬೇಕಾಗಿ ವಿನಂತಿ)

ಆ) ಈ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ೧೯೮೩-೮೪ರ ಸಾಲಿನ ಪ್ರಥಮದಿಂದ ಪ್ರಾರಂಭಿಸಿದ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ?

ಈ) ೧೯೮೪-೮೫ರ ಸಾಲಿಗಾಗಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ? (ಬೆಳಗಾಂ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡಬೇಕಾಗಿ ವಿನಂತಿ) ?

ಶ್ರೀ ರಾಜವರ್ಧನ (ಸಮಾಜಕಲ್ಯಾಣ ರಾಜ್ಯಮಂತ್ರಿಗಳು).—

ಅ) ೬೧೪ (ಪ್ರಿಮೆಟ್ರಿಕ್-೫೪೭ ಮತ್ತು ಪೋಸ್ಟ್ ಮೆಟ್ರಿಕ್-೬೭) ಜಿಲ್ಲಾವಾರು ವಿದ್ಯಾರ್ಥಿನಿಲಯ ಹಾಗೂ ಬಾಲಕ-ಬಾಲಕಿಯರ ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ ೧ ರಲ್ಲಿ ನೋಡಬಹುದು.

ಆ) ೪೦,೪೧೬.

ಇ) ೧೯೮೩-೮೪ ರಲ್ಲಿ, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿಲ್ಲ.

ಈ) ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದ ನಂತರ ಅದನ್ನು ಪರಿಗಣಿಸಲಾಗುವುದು.

ಅನುಬಂಧ–೧

ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರು ಅನುಸೂಚಿತ ಜಾತಿ ವಿದ್ಯಾರ್ಥಿಗಳ ಪ್ರಿ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳ ವಿವರಗಳು ಈ ಕೆಳಕಂಡಂತಿವೆ.:—

	ಜಿಲ್ಲಾ	ಪ್ರಿ ಮೆಟ್ರಿಕ್ ಬಾಲಕರು	ವಿದ್ಯಾರ್ಥಿನಿಲಯ ಬಾಲಕಿಯರು	ಒಟ್ಟು	ಪೋಸ್ಟ್ ಮೆಟ್ರಿಕ್ ಬಾಲಕರು	ವಿದ್ಯಾರ್ಥಿನಿಲಯ ಬಾಲಕಿಯರು	ಒಟ್ಟು
೧	ಬೆಂಗಳೂರು	೩೦	೧೪	೪೪	೨	೧	೩
೨	ತುಮಕೂರು	೧೯	೧೦	೨೯	೧೨	—	೧೨
೩	ಕೋಲಾರ	೨೪	೧೪	೩೮	೩	—	೩
೪	ಚಿತ್ರದುರ್ಗ	೧೯	೧೦	೨೯	೧೪	—	೧೪
೫	ಶಿವಮೊಗ್ಗ	೧೪	೯	೨೩	೧	—	೧
೬	ಮೈಸೂರು	೨೮	೧೨	೪೦	೪	೧	೫
೭	ಹಾಸನ	೧೯	೮	೨೭	೧	—	೧
೮	ಮಂಡ್ಯ	೧೧	೧೦	೨೧	೧	—	೧
೯	ಕೊಡಗು	೧೦	೫	೧೫	—	—	—
೧೦	ಚಿಕ್ಕಮಗಳೂರು	೧೩	೭	೨೦	೧	—	೧
೧೧	ದಕ್ಷಿಣ ಕನ್ನಡ	೧೩	೧೦	೨೩	—	—	—
೧೨	ಗುಲ್ಬರ್ಗ	೩೪	೧೨	೪೬	೧೦	—	೧೦
೧೩	ರಾಯಚೂರು	೧೯	೧೧	೩೦	೧	—	೧
೧೪	ಬೀದರ್	೧೬	೭	೨೩	೧೨	—	೧೨
೧೫	ಬಳ್ಳಾರಿ	೨೨	೮	೩೧	—	—	—
೧೬	ಬೆಳಗಾಂ	೧೭	೧೦	೨೭	—	—	—
೧೭	ಬಿಜಾಪುರ	೧೭	೧೧	೨೮	೧	—	೧
೧೮	ಧಾರವಾಡ	೨೦	೧೬	೩೬	೧	೧	೨
೧೯	ಉತ್ತರ ಕನ್ನಡ	೧೦	೭	೧೭	—	—	—
	ಒಟ್ಟು	೩೫೫	೧೯೨	೫೪೭	೬೪	೩	೬೭

ಶ್ರೀ ಪಿ.ಪಿ. ಹೆಗರೆ.—ಮಂತ್ರಿಗಳು ಜಿಲ್ಲಾವಾರು ಅಂಕಿ ಅಂಶಗಳನ್ನು ತಮ್ಮ ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಅವರು ಅದನ್ನು ಒದುತ್ತಿದ್ದರೆ ತಾವು ಬೇಡ ಎಂದು ಹೇಳಿದಿರಿ ಆದ್ದರಿಂದ ನಾನೇ ಅದನ್ನು ಓದುತ್ತೇನೆ.

ಉಪಸಭಾಧ್ಯಕ್ಷರು.—ವೇಳೆಯ ಪರಿಮಿತಿಯನ್ನು ಆರಿತು ತಾವು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ರಾಜವರ್ಧನ್.—ತಾವು ಜಿಲ್ಲಾವಾರು ಮಾಹಿತಿ ಕೆ ಳುತ್ತೀರಿ. ತುಮಕೂರಿನಲ್ಲಿ ಪೋಸ್ಟ್ ಮೆಟ್ರಿಕ್ ೧೨ ಹಾಸ್ಟೆಲುಗಳಿವೆ, ಅದೇ ರೀತಿ ಚಿತ್ರದುರ್ಗದಲ್ಲಿ ೧೪, ಗುಲ್ಬರ್ಗದಲ್ಲಿ ೧೦, ಬೀದರ್‌ನಲ್ಲಿ ೧೨ ಹಾಸ್ಟೆಲುಗಳಿವೆ, ಬಾಕಿ ಜಿಲ್ಲೆಗಳಲ್ಲಿ ಇಲ್ಲ. ಕೆಲವು ಜಿಲ್ಲೆಗಳಲ್ಲಿ ಒಂದೆರಡು ಹಾಸ್ಟೆಲುಗಳಿವೆ.

ಶ್ರೀ ಪಿ.ಪಿ. ಹೆಗರೆ.—ಈರೀತಿ ತಾರತಮ್ಯ ಏತಕ್ಕೆ? ಎಲ್ಲಾ ಜಿಲ್ಲೆಗಳಲ್ಲಿ ಏತಕ್ಕೆ ಪೋಸ್ಟ್ ಮೆಟ್ರಿಕ್ ಹಾಸ್ಟಲುಗಳು ಇಲ್ಲ. ಹರಿಜನ ಕಲ್ಯಾಣ ಆಗಬೆ ಕೆಂದು ಹೇಳುವಾಗ ಈ ರೀತಿ ಸೌಲಭ್ಯ ಗಳನ್ನು ಕಲ್ಪಿಸಿದರೆ ಆಗುತ್ತದೆಯೇ? ಮಹಿಳಾ ಕಲ್ಯಾಣ ಕೇಂದ್ರಗಳು ಸಹ ಎಲ್ಲಿಯೂ ಇಲ್ಲ. ಮಹಿಳೆಯರ ಕಲ್ಯಾಣವಾಗಬೇಕಾದರೆ, ಅವರು ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಹೊಂದಬೇಕಾದರೆ ಸಮಾಜ ಕಲ್ಯಾಣ ಇಲಾಖೆಯವರು ವುಮೆನ್ ವೆಲ್‌ಫೇರ್ ಸೆಂಟರ್-ಕಂ-ಬಾಲವಾಡಿ ಎಂದು ಪ್ರತಿಯೊಂದು ಗ್ರಾಮದಲ್ಲೂ ಒಂದೊಂದು ಕೇಂದ್ರಗಳನ್ನು ಮಾಡಬೇಕೆಂದು ನನ್ನ ವಾದ. ಕೆಲ ವೊಂದು ಜಿಲ್ಲೆಗಳಿಗೆ ೧೦-೧೨ ಹಾಸ್ಟೆಲುಗಳು, ಬೆಳಗಾಂ ಜಿಲ್ಲೆಗೆ ಮಾತ್ರ ಒಂದೇ ಒಂದು ಹಾಸ್ಟೆಲು. ಸರ್ಕಾರದವರು ಈ ತಾರತಮ್ಯವನ್ನು ಏತಕ್ಕೆ ಮಾಡಿದರು? ಕೆಲವೊಂದು ಜಿಲ್ಲೆಗಳಲ್ಲಿ ಮಾತ್ರ ಹರಿಜನರು ಶಿಕ್ಷಣ ಹೊಂದಲಿ ಎಂದೇ ಆಥವಾ ಹೇಗೆ? ಒಂದು ಕಡೆ ಮಾತ್ರ ಪ್ರಗತಿಯಾಗಲಿ ಇನ್ನೊಂದು ಕಡೆ ಬೇಡ ಎಂಬ ಉದ್ದೇಶ ಸರ್ಕಾರದ್ದೋ ಆಥವಾ ಏನು?

ಶ್ರೀ ರಾಜವರ್ಧನ್.—ಒಂದೆರಡು ಜಿಲ್ಲೆಗಳಲ್ಲಿ ಮಾತ್ರ ಹಾಸ್ಟೆಲುಗಳು ಇಲ್ಲ. ಬೇರೆ ಜಿಲ್ಲೆ ಯಲ್ಲಿ ಹಾಸ್ಟಲುಗಳು ಇರುವುದಕ್ಕೆ ಇದಕ್ಕೆ ಕಾರಣ, ಆಯಾಯ ಜಿಲ್ಲೆಗೆ ಸಂಬಂಧಪಟ್ಟ ಶಾಸಕರು ಆಗಾಗ ಬೇಡಿಕೆಗಳನ್ನು ಸಲ್ಲಿಸುತ್ತಿದ್ದುದರಿಂದ ಕೊಟ್ಟಿದ್ದೇವೆ. ಕೆಲವು ಕಡೆ ಬೇಡಿಕೆ ಬಾರದೆ ಇರುವ ಕಾರಣ ಕೊಟ್ಟಿಲ್ಲ. ಯಾವ ಜಿಲ್ಲೆಗಳಿಗೆ ಹಾಸ್ಟೆಲುಗಳು ಆಗತ್ಯ ಇದೆ ಎಂಬ ಬೇಡಿಕೆ ಬರುತ್ತದೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ.ಪಿ.ಹೆಗರೆ.—ನಾನು ಬೆಳಗಾಂ ಜಿಲ್ಲೆಗೆ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಬೇಕೆಂದು ೧೯೭೨ ರಿಂದ ಈ ಸದನದಲ್ಲಿ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಆಗ ಅವಶ್ಯಕತೆ ಇಲ್ಲದಿರಬಹುದು. ಈಗ ಇದ್ದರೆ ಮಾಡುತ್ತೇವೆಂದು ಹೆ ಳಿದ್ದಾರೆ.

ಶ್ರೀ ಪಿ.ಪಿ. ಹೆಗರೆ.—ಅವಶ್ಯಕತೆ ಇಲ್ಲದಿದ್ದರೆ ಕೇಳುತ್ತಿರಲಿಲ್ಲ. ಈ ಕೊರತೆ ಕೆಲವೊಂದು ಜಿಲ್ಲೆಗಳಲ್ಲಿ ಇದೆ. ಯಾವಾಯಾವ ಜಿಲ್ಲೆಗಳಿಗೆ ಯಾವಾಗ ಕೊಡುತ್ತೀರಿ. ಕೊಡಗು, ಬೆಳಗಾಂ ಮತ್ತು ನಾರ್ತ್ ಕೆನರಾದಲ್ಲಿ ಹಾಸ್ಟೆಲುಗಳು ಇಲ್ಲ. ಆದ್ದರಿಂದ, ಎಷ್ಟು ದಿನಗಳೊಳಗೆ ಆ ಜಿಲ್ಲೆ ಗಳಿಗೆ ಪೋಸ್ಟ್ ಮೆಟ್ರಿಕ್ ಹಾಸ್ಟೆಲುಗಳನ್ನು ಕೊಡುತ್ತೀರಿ?

ಶ್ರೀ ರಾಜವರ್ಧನ್.—ಹಿಂದೆ ಆದುದಕ್ಕೆ ನಾವು ಜವಾಬ್ದಾರರಾಗುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ? ಈಗ ಮಾನ್ಯ ಸದಸ್ಯರು ಬೇಡಿಕೆ ಕಳುಹಿಸಿದರೆ ನಿಜವಾಗಿ ಅವಶ್ಯಕತೆ ಇದ್ದಲ್ಲಿ ಹಾಸ್ಟೆಲುಗಳನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಪಿ. ಹೆಗರೆ.—ಪ್ರತಿಯೊಂದು ಜಿಲ್ಲೆಗೆ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಬೇಕೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಅದನ್ನು ನಾವು ಹೇಳಬೇಕೆ? ಒಂದೊಂದು ಜಿಲ್ಲೆಗೆ ೧೦-೧೫ ಹಾಸ್ಟೆಲುಗಳಿದ್ದರೆ ಒಂದೊಂದಕ್ಕೆ ಇಲ್ಲವೇ ಇಲ್ಲ. ಪ್ರತಿಯೊಂದು ಜಿಲ್ಲೆಗೂ ಹಾಸ್ಟೆಲಿನ ಅವಶ್ಯಕತೆ ಇದೆ. ಎಷ್ಟು ಹಾಸ್ಟೆಲುಗಳನ್ನು ಕೊಡುತ್ತಾರೋ ಅಷ್ಟು ಅವಶ್ಯಕತೆ ಇದೆ. ಸಾಧ್ಯವಾದಷ್ಟು ಮಟ್ಟಿಗೆ ಯಾವ ಯಾವ ಜಿಲ್ಲೆಗಳಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲುಗಳು ಇಲ್ಲವೋ ಅಲ್ಲೆಲ್ಲ ಈ ಹಾಸ್ಟೆಲುಗಳನ್ನು ತೆರೆಯುತ್ತೀರಾ?

ಶ್ರೀ ರಾಜವರ್ಧನ್.—ಕೆಲವು ಜಿಲ್ಲೆಗಳಿಗೆ ಹಾಸ್ಟಲುಗಳನ್ನು ಕೊಟ್ಟು ಕೆಲವು ಜಿಲ್ಲೆಗಳಿಗೆ ಕೊಡಬಾರದೆಂಬುದು ಸರ್ಕಾರಕ್ಕೆ ಇಲ್ಲ. ಆದರೆ ಹಂತ ಹಂತವಾಗಿ ಕೊಡುವಾಗ ಕೆಲವು ಜಿಲ್ಲೆಗಳಿಗೆ

ಕೊಟ್ಟಿದ್ದೇವೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮೊದಲೇ ಹೇಳಿದ ಹಾಗೆ ಅವಶ್ಯಕತೆ ಇದೆ ಎನ್ನುವುದು ಗೊತ್ತಾದರೆ ಖಂಡಿತ ಕೊಡುತ್ತೇವೆ. ಈಗತಾನೇ ಸದಸ್ಯರು ಹೇಳಿದರು, ೧೯೭೨ ರಿಂದ ಬೇಡಿಕೆ ಇಟ್ಟಿದ್ದೇನೆ ಎಂದು, ಅದು ನನಗೆ ಗೊತ್ತಿಲ್ಲ. ಮತ್ತೆ ಸದಸ್ಯರು ಹೇಳಿರುವುದರಿಂದ ಆದಷ್ಟು ಜಾಗ್ರತೆ ಅಲ್ಲಿಗೆ ಹಾಸ್ಪೆಲನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಪಿ. ಹೆಗಡೆ.—ಧಾರವಾಡದಲ್ಲಿ ಮೊದಲು ಒಂದು ಪೋಸ್ಟ್ ಮೆಟ್ರಿಕ್ ಹಾಸ್ಟೆಲು ಇತ್ತು. ಅದು ಈ ವರ್ಷ ಜನತಾ ಸರ್ಕಾರ ಬಂದಮೇಲೆ ಬಂದಾಗಿದೆ. ಅದರ ಸಲುವಾಗಿ ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ್ದರಿಂದ ಅದನ್ನು ಬಂದ್ ಮಾಡಿದರು ಆ ಕಟ್ಟಡವನ್ನು ಕೂಡ ಈಗ ಅರ್ಧಕ್ಕೆ ನಿಲ್ಲಿಸಿದ್ದಾರೆ. ೧೮ ಪರ್ಸೆಂಟ್ ಗ್ರಾಂಟಿನಲ್ಲಿ ಕಟ್ಟಡ ಕಟ್ಟಬೇಕೆಂದು ಮಾಡಿದರು, ಅದು ಈಗ ನಿಂತು ಹೋಗಿದೆ. ಇದಕ್ಕೆ ಏನಾದರೂ ಕಾರಣ ಇದೆಯೇ ?

ಶ್ರೀ ರಾಜವರ್ಧನ್.—ಹಾಸ್ಟೆಲು ಬಂದಾಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಆದರೆ ಹಾಸ್ಟಲು ಕಟ್ಟಡಕ್ಕೆ ವರ್ಷ ವರ್ಷ ಎಷ್ಟು ಗ್ರಾಂಟ್ ಕೊಡುತ್ತಾರೆ ಅದರ ಮೇಲ್ಕಿಕಿಲಸ ನಡೆಯುತ್ತದೆ.

ಶ್ರೀ ಪಿ.ಪಿ. ಹೆಗಡೆ.—ಆ ಹಾಸ್ಟೆಲನ್ನು ಇನ್ನು ಮೇಲಾದರೂ ಪ್ರಾರಂಭ ಮಾಡುತ್ತೀರಾ ?

ಶ್ರೀ ರಾಜವರ್ಧನ್.—ಅದನ್ನು ಪರಿಶೀಲನೆ ಮಾಡಲಾಗುವುದು.

೧೧೮. ಶ್ರೀ ವಿ. ಮುನಿಯಪ್ಪ( ).—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಂಗಳೂರಿನಿಂದ, ಸಾದಲಿಗೆ, ದೇವನಹಳ್ಳಿ ವಿಜಯಪುರ ಶಿಡ್ಲಘಟ್ಟ, ಮುಖಾಂತರ ಸುಮಾರು ೨೦ ವರ್ಷಗಳಿಂದ ಸಂಚರಿಸುತ್ತಿದ್ದ ಬಸ್ಸನ್ನು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿ ಮುನ್ಸೂಚನೆ ಇಲ್ಲದೆ ಧೀರ್ಘ ಕಾಲದಿಂದ ಓಡುತ್ತಿದ್ದ ಬಸ್ಸನ್ನು ನಿಲ್ಲಿಸಲು ಕಾರಣಗಳೇನು ?

ಇ) ಸಾರ್ವಜನಿಕರ ಹಿತದೃಷ್ಟಿಯಿಂದ ಮೊದಲಿನಂತೆ ಬಸ್ಸನ್ನು ಓಡಿಸಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೇ ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು).—(ಅ) ಬೆಂಗಳೂರು, ಸಾದಲಿ ಬಸ್ಸನ್ನು ತೆಗೆದು ಹಾಕಿರುವುದಿಲ್ಲ, ಆದರೆ ಆ ಬಸ್ಸನ್ನು ಸಾದಲಿಯಿಂದ ಮುಂದೆ ವಿಟ್ಟೇಮರಿಗೆ ಮುಂದುವರಿಸಲಾಗಿದೆ. ಅದನ್ನು ಮಳೆಗಾಲದ ಪ್ರಯುಕ್ತ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಆ) ಮಳೆಗಾಲದಲ್ಲಿ ಸಾಕಷ್ಟು ಪ್ರಯಾಣಿಕರು ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ನಿಲ್ಲಿಸ ಲಾಗಿದೆ.

ಇ) ಮಳೆಗಾಲ ಮುಗಿಯುತ್ತಿದ್ದಂತೆಯೇ, ಪ್ರಯಾಣಿಕರ ಅವಶ್ಯಕತೆಗಳಿಗನುಗುಣವಾಗಿ ಮತ್ತೆ ಪ್ರಾರಂಭಿಸಲಾಗುವುದು.

ಶ್ರೀ ವಿ. ಮುನಿಯಪ್ಪ.—ಈ ಬಸ್ಸು ಕಳೆದ ೨೦ ವರ್ಷಗಳಿಂದ ನಮ್ಮ ರಸ್ತೆಯಲ್ಲಿ ಸಂಚಾರ ಮಾಡುತ್ತಿತ್ತು. ಅದನ್ನು ಯಾವ ಯಾವ ವರ್ಷದ ಮಳೆಗಾಲದಲ್ಲಿ ನಿಲ್ಲಿಸಲಾಗಿತ್ತು ಮತ್ತು ಬೇಸಿಗೆ ಯಲ್ಲಿ ಓಡಿಸುವ ವ್ಯವಸ್ಥೆ ಯಾವ ಯಾವ ವರ್ಷದಲ್ಲಿ ಇತ್ತು ?

ಶ್ರೀ ಎಂ. ಪಿ. ಪ್ರಕಾಶ್.—ಇಲ್ಲಿಯವರೆಗೆ ಆ ರೀತಿಯಾಗಿ ಮಳೆಗಾಲದಲ್ಲಿ ನಿಲ್ಲಿಸಿರಲಿಲ್ಲ. ಆದರೆ ಈಗ ವರಮಾನ ಕಡಿಮೆಯಾಗಿದೆ ಎಂದು ಈ ವರ್ಷದ ಮಳೆಗಾಲದಲ್ಲಿ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಶ್ರೀ ವಿ. ಮುನಿಯಪ್ಪ.—ಇದು ಕಳೆದ ೨೦ ವರ್ಷಗಳಿಂದ ಓಡುತ್ತಿದ್ದ ಬಸ್ಸು, ಕಳೆದ ೫–೬ ತಿಂಗಳಲ್ಲಿ ವರಮಾನ ಕಡಿಮೆಯಾಗಿ ಬಸ್ಸು ನಿಂತಿತು ಎಂದರೆ ಆ ರಸ್ತೆಯಲ್ಲಿ ಓಡಾಡುವ ಜನರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಸರ್ಕಾರ ಗಮನಿಸಿದೆಯೆ? ಯಾವುದೋ ಅಧಿಕಾರಿ ದುರುದ್ದೇಶ ಇಟ್ಟುಕೊಂಡು ಮಾಡಿದ್ದರೂ ತಾವು ಅದೇ ಉತ್ತರ ಹೇಳಿದರೆ ಹೇಗೆ ? ೨೦ ವರ್ಷಗಳಿಂದ ಓಡು ತ್ತಿದ್ದ ಬಸ್ಸು ನಿಂತಿದೆ ಎಂದರೆ ಜನರಿಗೆ ಎಷ್ಟು ತೊಂದರೆಯಾಗಿದೆ ? ಅದು ಸಂಜೆ ವೇಳೆ ಶಿಡ್ಲಘಟ್ಟ